Regd No M 1299 34 th Year ತಾ|| 13—3—51

ಸತ್ಯವಾದಿ ಸೋಮವಾರ ಸಂಚಿಕೆ

ಶ್ರೀ ದ್ವಾರಕಾ ಜಗದ್ಗುರುಗಳವರ

ಉದಾತ್ತಾಶ್ರಯದಲ್ಲಿ ಪ್ರಕಟವಾಗುವ

ಪ್ರ ಬೋ ಧ

ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ

ವಾರ್ಷಿಕ ಚಂದಾ

ಅಂಚೆಯೆಚ್ಚ ಸಮೇತ 1—14—0

ಸತ್ಯವಾದಿ

SATYAVADI

ಸ್ವತ್ವಾಧಿಕಾರಿಗಳು- ಅಮ್ಮನವರ ಸಿರಸ್ತೆದಾರ್ ಎಂ. ವಿ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಗೋ ರ ಕ್ಷ ಣೆ

[ತಿಂಗಳಿಗೊಂದಾವರ್ತ]

ವಾರ್ಷಿಕಚಂದಾ ಅಂಚೆವೆಚ್ಚ ಸೇರಿ 8 ಆಣೆ

Protect the Cow

ಗೋರಕ್ಷಣೆ ನಡೆಯಲಿ

ರಾಮರಾಜ್ಯವೆಂದು ಜಗದ್ವಿಖ್ಯಾತವಾಗಿರುವ ವೈಸೂರಿನಲ್ಲಿ 'ರಾಮರಾಜ್ಯ ಪರಿಷತ್ತು' ಸಂಸ್ಥಾಪಿತವಾದುದು ಸಂತೋಷಾರ್ಹ ಸುದ್ದಿ

ಚುನಾವಣೆಯಲ್ಲಿ ಸ್ಪರ್ಧಿಸುವದು, ಧರ್ಮರಾಜ್ಯ ಸಂಸ್ಥಾಪಿಸುವದು ಪರಿಷತ್ ಕಾರ್ಯಕ್ರಮಗಳಲ್ಲಿ ಸೇರಿದೆ. ರಾಮರಾಜ್ಯ ಪರಿಷತ್ ಧಾರ್ಮಿಕ ರಾಜಕೀಯ ಸಂಸ್ಥೆ.

ರಾಮರಾಜ್ಯ ಪರಿಷತ್‌ಗೆ ಶ್ರೀ ದ್ವಾರಕಾ ಜಗದ್ಗುರುಗಳವರ, ಶ್ರೀ ಕರಪಾತ್ರಜೀಯವರ ಆಶೀರ್ವಾದ ಬಲವಿದೆ.

ಧಾರ್ಮಿಕ ಪ್ರಜಾರಾಜ್ಯ ಸಂಸ್ಥಾಪನೆ ಗುರಿಯಿಟ್ಟಿರುವ ರಾಮರಾಜ್ಯ ಪರಿಷತ್ ಕೃತಕೃತ್ಯವಾಗಲಿ.

ವಿಶ್ವ ಫೆಡರಲ್ ಪ್ರಭುತ್ವ ಪರಿಷತ್ ಮುಂದಿನ ಮಾಹೆ ತಾ|| 2 ರಿಂದ 8 ರವರಿಗೆ ರೋಂನಲ್ಲಿ ನಡೆಯುತ್ತದೆ. ನೀವು ಪರಿಷತ್‌ಗೆ ಒನ್ನೆರೆಂದು ಭಾರತ ಪಾರ್ಲಿಮೆಂಟ್ ಸದಸ್ಯ ಶ್ರೀ ಗೋವಿಂದ ದಾಸರಿಗೆ ಆಮಂತ್ರಣ ಬಂದಿದೆ

ಮೊನ್ನೆ 2 ಮಂಗಗಳು ಮಧ್ಯ ಪ್ರದೇಶ ಶಾಸನ ಸಭೆ ಕಾರ್ಯಕಲಾಪಗಳನ್ನ 2 ನಿಮಿಷಗಳ ಕಾಲ ಶಾಂತಚಿತ್ತದಿಂದ ವೀಕ್ಷಿಸಿದವು. ಆಹಾರ ಸಚಿವರು ಏನಂ ಕೊಡಲೆದ್ದಾಗ ಅವು ಗಲಾಟೆ ಮಾಡಲು ಹೊಂಹಾಕಲಾಯಿತು.

ಟಿಕೆಟ್‌ಲೆಸ್ ಪ್ರಯಾಣಿಕರು 31 ಸಹಸ್ರ ಮಂದಿ ಅಯೋಧ್ಯೆ-ತಿರೆಟ್ ರೈಲ್ವೆಯಲ್ಲಿ ಪತ್ತೆಯಾದರು. ಅವರ ಪೈಕಿ 23 ನೂರು ಮಂದಿ ದುಡ್ಡ ಕೊಡದೆ ಸೆರೆ ಸೇರಿದರು. ಉಳಿದವರಿಂದ 71 ಸಹಸ್ರ ರೂ. ವಸೂಲಾಯಿತು.

ಬಾಂಬೆ ಟಾಕೀಸಿನವರ ಸಂಗ್ರಾಮ ಚಿತ್ರಪಟವು ಮುಂಬೈನಲ್ಲಿ ಪ್ರಾರಂಭವಾಗಿದ್ದು ಒಂದೇ ವಾರದಲ್ಲಿ 1 ಲಕ್ಷ 16 ಸಾವಿರ 8 ನೂರು ರೂಪಾಯಿಗಳಿಸಿ ತೀರ್ತ ತಂದಿದೆ; ಈ ಚಿತ್ರವು ಮುಂಬೈನಲ್ಲಿ 9 ಟಾಕೀಜುಗಳಲ್ಲಿ ಸಾಂಗವಾಗಿದೆ.

ದಿವ್ಯವಾಣಿ

'ಸನಗೆ ಇದು ತಿಳಿಯದಾದುದರಿಂದ ಇದು ಸಳ್ಳ' ಎಂದು ಎಂದಿಗೂ ನುಡಿಯಬೇಡ. —ಬಾಬಾ ಮಾಧವದಾಸ್

ಭಾರತ-ನೇಪಾಳ ಗಡಿಯಲ್ಲಿ ತಲೆಹಾಕಿಕೊಂಡಿದ್ದ ದರೋಡೆಗಾರರನ್ನು ಬಂಧಿಸಲು ಭಾರತ ಸೇನೆ ನೇಪಾಳಕ್ಕೆ ತೆರಳಿತೆಂದು ಪಂ|| ನೆಹರು ಹೇಳಿಕೆ

ಮಾಸ್ಕೊ ಬಾನುಲಿ ಮೊನ್ನೆ ಸುದ್ದಿ ಬಿತ್ತಿ ಕೊರಿಯದ ಸರ್ವ ರಣಕ್ಷೇತ್ರಗಳಲ್ಲೂ ಕೆಂಪು ಸೇನೆಗಳು ತಮ್ಮ ಹಿಡಿತದಲ್ಲಿರುವ ನೆಲವನ್ನು ತ್ಯಜಿಸಿಲ್ಲವೆಂದು ತಿಳಿಸಿದೆ.

ಕೃತ್ರಿಮ ರೀತಿಯಿಂದ ಒಂದು ವರ್ಷದಲ್ಲಿ ಐದು ಗೋಧಿ ಬೆಳೆಗಳನ್ನು ಬೆಳೆಯುವುದನ್ನು ಸೋವಿಯಟ್ ಶಾಸ್ತ್ರಜ್ಞರು ಶೋಧಿಸಿದ್ದಾರೆಂದು ಲಂಡನ್ನಿನಲ್ಲಿ ಸೋವಿಯಟ್ ನ್ಯೂಸ್ ವಿಜ್ಞಪ್ತಿ ಬಿತ್ತರಿಸಿದೆ

ಮೈಸೂರು ಶಾಸನ ಸಭೆಗೆ ಶ್ರೀ ಡಿ. ಹೆಚ್. ಚಂದ್ರಶೇಖರಯ್ಯನವರು ನಿರ್ಣಯ ಕಳಿಸಿ ಸರ್ಕಾರಿ ನೌಕರರಿಗೆ ಶೇ 50 ತುಟ್ಟಿ ಭತ್ಯ ಹೆಚ್ಚಿಸಬೇಕೆಂದು ತಿಳಿಸಿರುವರು.

ಅಮೇರಿಕದ 8 ನೆ ಸೇನೆಯ ದಳಪತಿ ಮೊನ್ನೆ ಟೋಕಿಯೋದಲ್ಲಿ ಹೀಗೆ ಹೇಳಿಕೆ ಹೊರಡಿಸಿದ್ದಾರೆ – ವಿಶ್ವಸಂಸ್ಥೆ ಸಭೆಗಳು ಕೊರಿಯದ 38 ನೇ ದ್ವಂದ್ವದಲ್ಲಿ ನಿಂತರೆ ಅದೇ ಮಹದ್ವಿಜಯ.

ಅಲುಮಿನಿಯಂ ಡಬರಿಯಂತೆ ಆಕಾರ, ಬೆಲೆ 6 ಕಾಲು ಸೌಂಡು. ಈ ಸುಲಭ ಬೆಲೆ ರೇಡಿಯೋ ಸೆಟ್‌ನ್ನು ಆಫ್ರಿಕದ ಹಿಂದುಳಿದವರಿಗಾಗಿ ತಯಾರಿಸಲಾಗಿಗೆ

ತಿರುವಾಂಕೂರು-ಕೊಚ್ಚಿನ್ ಆಂದಾಜಪಟ್ಟಿಯಲ್ಲಿ 4 11 ಲಕ್ಷ ರೂ ಮೋತ ಬಂದಿದೆ ಹೊಸ ತೆರಿಗೆ ಏನೂ ಇಲ್ಲದ ದ್ದರೂ ದೇಶಿ ಹೊಡವ ಮೇಲೆ ತೆರಿಗೆ ಅಧಿಕವಾಗುವದು

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಶಿ ಮೇಲೆ ಲೀಗಲ್ ಕಮ

ಮದಂತಿನ ಮಾಜಿ ಮುಖ್ಯ ಮಂತ್ರಿ ಶ್ರೀ ಟಿ ಪ್ರಕಾಶಂರವರು ಭಾರತ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಮೋಹನಲಾಲ್ ಗೌತಮರಿಗೆ ಪತ್ರ ಬರೆದ ನಿರ್ಣಯಕ್ಕೆ ಸಂಬಂಧಪಟ್ಟ ಕೃತಿಯೊಬ್ಬರ ಮೇಲೂ, ಇನ್ನು 4 ವಾರಗಳಲ್ಲಿ ಕಮ್ಯೂ ಮೇಲೆ ಅಂಗೀಕಾರವಾಗಿರುವ ನಿರ್ಣಯವನ್ನು ವಾಪಸು ಪಡೆಯದಿದ್ದರೆ ಲೀಗಲ್ ಕ್ರಮ ತೆಗೆದುಕೊಳ್ಳುವಂತಾಗಿ ತಿಳಿಸಿದ್ದಾರೆ

ಮೊನ್ನೆ ನವದೆಹಲಿಯ ಲಕ್ಷ್ಮಿನಾರಾಯಣ ವತ್ತು ಬುದ್ಧ ದೇವಾಲಯದ ಕೆಲಸಗಾರನೋರ್ವನಿಗೆ ರೂ 1244 ಇದ್ದ ಪರ್ಸ್ ಸಿಕ್ಕಿದ್ದು ಸಕ್ಕದಲ್ಲಿ ಸಿಕ್ಕಿತು ಎಷ್ಟಿಯು ಕ್ರೀಡೆಯು ಜಪಾನ್ ಪ್ರಾತಿನಿಧ್ಯದ ನಾಯಕನ ಪರ್ಸ್ ಆದು. ಅದನ್ನು ಆತನಿಗೆ ವಾಪಸು ಮಾಡಲು ಸಾಧ್ಯವಾದು ಭಾರತೀಯ ಸತ್ಯ ಎಂದು ಆತನು ನುಡಿದಿರುವನು

ಅಖಿಲ ಭಾರತ ಟ್ರೇಡ್ ಯೂನಿಯನ್‌ಗಳು ಮನವಿಯೊಂದನ್ನು ಹೊರಡಿಸಿ ಲೇಬರ್ ಯೂನಿಯನ್ ಹಾಗೂ ಟ್ರೇಡ್ ಯೂನಿಯನ್ ಮಸೂದೆಯನ್ನು ವಾಪಿಸಿಮೆಂಟ್ ಅಂಗೀಕರಿಸಕೂಡದೆಂದು ಪ್ರಾರ್ಥಿಸಿವೆ

15 ನೇ ತ|| ಮಧ್ಯಾಹ್ನ ಶ್ರೀಮನ್ಮಹಾಂಕಾಳಿ ಜೊಂಗಳೂರು ಸುಬ್ಬಣ್ಣ ಚೆಟ್ಟರ ಸುಧಾಭವನದಲ್ಲಿ ಮೈಸೂರು ಶಾಸನ ಸಭೆಯ ಅಯುನ್ಯಯ ಅಧಿವೇಶನವನ್ನು ಪ್ರಾರಂಭಿಸವರು. ಅಂದಾಜಪಟ್ಟಿ 19 ನೇ ತಾ|| ಸಭೆ ಮುಂದೆ ಮಂಡಿಸಲ್ಪಡುವದು. ಸಭೆ ಏಪ್ರಿಲ್ 5 ರವರಿಗೆ ಜರುಗುವುದು : ಸಭೆಯು 56 ನಿರ್ಣಯಗಳನ್ನು ಚರ್ಚಿಸುವದು.

ತಗಡು ವ್ಯಾಪಾರವನ್ನು ಅನೇರಿಕ ಸರ್ಕಾರವೇ ವಹಿಸಿಕೊಂಡಿತೆಂದು ವಾಷಿಂಗ್ಟ್ ವಾರ್ತೆ.

ಕ್ಯಾಂಟರ್‌ಬರಿಯಲ್ಲಿ ಮೊನ್ನೆ 51 ಮಂದಿ ಗೂಢಚಾರರನ್ನು ಗಲ್ಲಿಗೇರಿಸಲಾದ ವರದಿ ಹಾಂಕಾಂಗಿನಿಂದ ಬಂದಿದೆ

ಕಲ್ಕತ್ತಾದಲ್ಲಿ ಲೈಸೆನ್ಸಿಲ್ಲದೆ ಒಟ್ಟೆ ಪಡೆದಿದ್ದ ವರ್ತಕನ ಬಂಧನವಾಗಿದೆ

ಜವರ ಎಂಬ ವಂಡ್ಯದ ಸಕ್ಕರೆ ಸಂಸ್ಥೆ ಸಾತನೂರು ಫಾರಂನ ಕಾವಲು ನೀರಾ ಹಂಚಿಕೆ ಬಗ್ಗೆ ಜಗಳದಲ್ಲಿ ನಿನ್ನೆ ಪತ್ತನೆಂದು ಮಂಡ್ಯ ವಾರ್ತೆ.

ಆಫ್ಘಾನಿಸ್ಥಾನದ ಆಮಂತ್ರಣವನ್ನು ಮನ್ನಿಸಿ ಪ್ಯಾಲಸ್ಟೈನಿನ ಗ್ರ್ಯಾಂಡ್ ಮುಫ್ತಿಯವರು ಕಾಬೂಲಿಗೆ ತೆರಳಿದರೆಂದು ಲಾಹೋರ್ ವಾರ್ತೆ.

ಶ್ರೀ ಟಿ ಎಸ್ ಸುಬ್ಬಣ್ಣ ಮೊದಲಾದವರ ಪ್ರಯತ್ನದಿಂದ ಮೈಸೂರು ಜಿಲ್ಲ ಪ್ರೆಸ್ ಕೆಲಸಗಾರರ ಸಂಘ ಸ್ಥಾಪಿತವಾಯಿತು

ಮೈಸೂರು ವಿಶ್ವವಿದ್ಯಾನಿಲಯದ ಸೆನಟ್ ಸಭೆಯಲ್ಲಿ ವೈಸ್‌ಛಾನ್ಸಲರ್ ಇತ್ತ ಹೇಳಿಕೆಯಲ್ಲಿ ಶೇ|| 30 ರಷ್ಟು ವಿದ್ಯಾರ್ಥಿಗಳು ಶುಲ್ಕ ಕೊಡುತ್ತಿಲ್ಲವೆಂದರು ; ಶುಲ್ಕ ಹೆಚ್ಚಿಸಿದರೆ ಸರ್ಕಾರಿ ಗ್ರ್ಯಾಂಟು ಕಡಿವೆಯಾಗಬಹುದೆಂದು ತೀ ಎ ವೆಂಕಟೇಶ್ಯನವರು ಅಭಿಪ್ರಾಯಪಟ್ಟಿದ್ದಾರೆ

ಹದಿನೈದು ಮೊಕದ್ದಮೆಗಳಲ್ಲಿ ವಾರಂಟ್ಟಾದು ಮುಂದಿ ಅಪರಾಧಿಗಳಿಗೆ ಒಟ್ಟು ರೂ 4/66 0 ದಂಡವಶ್ಯ ಕೋರ್ಟು ಏಳನೆ ವರೆಗಿನಿಂದ ಹಿಡಿದು 18 ತಿಂಗಳ ವರೆಗೆ ಸೆಜ ಕಳ್ಳಪೇಟೆ ಅರೋಪದ ವೇಲೆ ನಿನ್ನೆ ವಿಧಿಸಲಾಯಿತು. ತಿರುದು ಕಾಶಿ ವಾರ್ತೆ

ಸೋವಿಯಟ್ ಯೂನಿಯನ್ನಿನಲ್ಲಿ ಹೊಸ ಥಿಯೇಟರುಗಳೂ ಕ್ಲಬ್ಬುಗಳೂ

(ಇವಾಕ್ ಫೆಟ್ ವಿಎ ಥವರಿಂದ)

—

ಸೋವಿಯಟ್ ಪ್ರಜೆಗಳ ಪ್ರವರ್ಧಮಾನ ವೈಜ್ಞಾನಿಕ ಶೃಷೆಮುನ್ನು ತೃಪ್ತಿಗೊಳಿಸುತ್ತಾ ಏನೋದವಿಕಾಸಗಳನ್ನು ಯುವ ಸಂಸ್ಥೆಗಳು ವರ್ಷವರ್ಷಕ್ಕೆ ಬಲೆಯಂತೆ ವಿಸ್ತರಗೊಳ್ಳುತ್ತಾ ಹೋಗುತ್ತಿವೆ : ಇವುಗಳಿಗಾಗಿ ಉನ್ನತಗಳಾದ ನೂತನ ಭವನಗಳು ನಿರ್ಮಾಣಮಾಡಲ್ಪಟ್ಟವೆ.

ಕಳೆದ ಯುದ್ಧದಲ್ಲಿ ಹಿಟ್ಲರೈಟುಗಳು ಸ್ಟಾಲಿನ್ಗ್ರಾಡಿನಲ್ಲಿಯೂ ಸ್ಮೋಲೆನ್ಸ್ಕಿನಲ್ಲೂ ನಾಶಗೊಳಿಸಿದ ಥಿಯೇಟರುಗಳು ಪುನರ್ನಿರ್ಮಾಣವಾಗುತ್ತಿವೆ.

ಸೋವಿಯಟ್ ರಾಜ್ಯದಲ್ಲಿ ಸಿನಿಮಾ ಅತಿ ಪ್ರಿಯವಾದ ಕಲೆಯಾಗಿದೆ. ಸ್ಟಾಲಿನ್ ಪಂಚವರ್ಷ ಪ್ರಣಾಳಿಕೆಯ ಕಾಲದಲ್ಲಿ ಸಿನಿಮಾ ಪ್ರದರ್ಶನ ಶಾಲೆಗಳ ಸಂಖ್ಯೆಯು ಹೆಚ್ಚಿತು. 1949 ನೇ ಜನವರಿವರೆಗೆ ಮೊದಲ್ಗೊಂಡು ನನೆಂಬರು ತಿಂಗಳೊಳಗಾಗಿ ಹತ್ತು ಸಾವಿರ ಹೊಸ ಸಿನಿಮಾ ಥಿಯೇಟರುಗಳು ನಿರ್ಮಿಸಲ್ಪಟ್ಟವು 1950 ರಲ್ಲಿ ಈ ಸಂಖ್ಯೆಯು ಇನ್ನೂ ಹೆಚ್ಚಾಗಿದೆ ; ಏಕೆಂದರೆ ಆ ದೇಶದಲ್ಲೆಲ್ಲಾ ಒಟ್ಟು ಮುವತ್ತಾರು ಸಾವಿರ ಥಿಯೇಟರುಗಳು ಇಂಬೇಕಾಗಿದೆ ; ಅನೇಕ ಪಟ್ಟಣಗಳಲ್ಲಿಯೂ ಹಳ್ಳಿಗಳಲ್ಲಿಯೂ ಈ ಕಾರ್ಯವು ಹೆಚ್ಚು ತೀವ್ರತೆಯೊಡನೆ ನಡೆಯುತ್ತಿದೆ. ಡೋನೆಟ್ಸ್ ಕಲ್ಲಿದ್ದಲು ಗಣಿಗಳ ಪ್ರಾಂತ್ಯದಲ್ಲಿಯೂ, ಯೂರೆಲ್ಸ್ನಲ್ಲಿಯೂ, ಸೈಬೀರಿಯಾದಲ್ಲಿಯೂ, ದೇಶದಲ್ಲೆಲ್ಲಾ ಈ ನಿರ್ಮಾಣವು ನಿರವಧಿಕವಾಗಿ ನಡೆತ್ತಿದೆ.

ಕ್ಲಬ್ಬುಗಳೂ, ವೈಜ್ಞಾನಿಕ ಭವನಗಳೂ, ಗೃಹಗಳೂ ಮೊದಲಾದ ಸೋವಿಯಟ್ ವಿಜ್ಞಾನ ಕೇಂದ್ರಗಳು ಪ್ರಜೆಗಳ ಅದರಾಭಿಮಾನಗಳನ್ನು ಸೂರೆಗೊಂಡಿವೆ. ಎರಡನೆಯ ಪ್ರಪಂಚ ಯುದ್ಧಕ್ಕೆ ಮುಂಚೆ ಅವುಗಳ ಸಂಖ್ಯೆ ಸಾವಿರಕ್ಕೆ ಮಿಗಿಲಿತ್ತು ; ಆದರೆ ಯುದ್ಧದಲ್ಲಿ 1500 ಕ್ಕಿಂತ ಹೆಚ್ಚಾಗಿ ನಾಶವಾದವು.

1935 ರಿಂದ 1949 ರವರೆಗೆ ಸೋವಿಯಟ್ ಟ್ರೇಡ್ ಯೂನಿಯನ್ನುಗಳು ಒಟ್ಟು ೩ ಸಾವಿರ ಕ್ಲಬ್ಬುಗಳನ್ನೂ ವಿಜ್ಞಾನ ಕೇಂದ್ರಗಳನ್ನೂ ಹೊಸದಾಗಿ ನಿರ್ಮಿಸಿವೆ ಹಾಗೂ ಬೇಗೆರ್ಪಡಿದ್ದಾರ ಮಾಡಿವೆ ; ಇಂದು ಟ್ರೇಡ್ ಯೂನಿಯನ್ನುಗಳು ನಿರ್ವಹಿಸುತ್ತಿರುವ ಕ್ಲಬ್ಬುಗಳ ಮತ್ತು ವಿಜ್ಞಾನಮಂದಿರಗಳ ಸಂಖ್ಯೆ ಎಂಟು ಸಾವಿರ ; ಇವಲ್ಲದೆ ಆಫೀಸುಗಳಲ್ಲಿಯೂ, ಫ್ಯಾಕ್ಟರಿಗಳಲ್ಲಿಯೂ, ವೈಜ್ಞಾನಿಕಾಭಿವೃದ್ಧಿಗಾಗಿ ಸಡೆಸುತ್ತಿರುವ ಕೇಂದ್ರಗಳ ಸಂಖ್ಯೆ ಎಪ್ಪತ್ತೈದು ಸಾವಿರ.

ಉಪಯೋಗಗಳು

ಇಂದಿನ ಕಾಲದ ರೈತರಿಗೆ ಸಿಮೆಂಟು ಅದೆಂತಹ ವರಪ್ರದವಾಗಿದೆ. ಹಳೇ ಕಾಲದಲ್ಲಿ ಅತ ಕಟ್ಟಿಸಿಕೊಳ್ಳುತ್ತಿದ್ದ ತನಗೆ ಬೇಕಾದ ಕಣಜದಲ್ಲಿನ ಬಾಳಿಕೆಯು ನೆಲವಾಗಲಿ, ಕೋಳಿಗೂಡು ಉಗ್ರಾಣ, ಗೊಬ್ಬರ ಗುಂಡಿ, ಕೃಷಿಸಾಮಗ್ರಿಗಳನ್ನಿಡುವ ಕೊರಣೆ, ಹಾಲಿನ ಕವಾಟ, ಗಾಡಿ ಕೊಟ್ಟಿಗೆ, ನೆಲಮಾಳಿಗೆ ಉಗ್ರಾಣ, ಗೇಟು ಕೊಟ್ಟಿ, ಬೇರೆ ಅಥವಾ ಕೊಳವೇ ಆಗಲಿ ಇಂದು ಸಿಮೆಂಟ್ ಕಾಂಕ್ರೀಟ್‌ನಿಂದ ಅಧುನಿಕವಾಗಿದೆ. ವ್ಯವಸ್ಥಾಯಗಾರನು ತನ್ನ ನೆಲಮಾಳಿಗೆಯ ಪಾಯವು ಕುಸಿದು ಹೋಗಬಹುದೆಂದು ಹೆದರಬೇಕಾಗಿಲ್ಲ. ಕಾಂಕ್ರೀಟ್ ನೆಲ ಮತ್ತು ಗೋಡೆಗಳಿಂದ ಅತನಿಗೆ ನಿಶ್ಚಿಂತತೆಯಿಂದ ಇರಲು ಸಾಧ್ಯವಾಗಿದೆ ಇಲಿ ಹೆಗ್ಗಣಗಳ ಹಾವಳಿ ದೂರವಾಗಿದೆ. ಕಾಂಕ್ರೀಟು ನೆಲಗಳು ನೀರನ್ನು ಹೀರದಿದ್ದು ತೇವತರಾದಂತಹವುಗಳಾಗಿರುವುದರಿಂದ ಶುಚಿಯಾಗಿಯೂ ಆರೋಗ್ಯಕರವಾಗಿಯೂ ಇದನ್ನು ಇರಿಸಬಹುದಾದುದರಿಂದ ಆರೋಗ್ಯ ರಕ್ಷಣೆಯೇ ಆತನ ಮನೆಬಾಗಿಲಿದ್ದಂತಾಗುವುದು. ಈ ನೆಲಗಳು ಗಟ್ಟಿಯಾಗಿದ್ದು ನಯವಾಗಿರುವ ಮೇಲ್ಮೈ ವಾಸನೆಗಳನ್ನು ಸ್ಥಿರವಾಗಿ ನಿಲ್ಲಗೊಡುವುದಿಲ್ಲ ಕಣದ ನೆಲವು ಶುಚಿಯಾಗಿದ್ದು ಅಮೂಲ್ಯ ಗೊಬ್ಬರಗಳನ್ನು ಕೂಡಿಡಲು ಹುರುಪೀಯುತ್ತವೆ. ಈ ಅಸಂಖ್ಯಾತ ಸೌಲಭ್ಯಗಳಿದ್ದರೂ ಇದು ವ್ಯಯವು ದ್ದಾಗಿದೆ. ರಕ್ಷಣ ಖರ್ಚು ಅಗಣನೀಯ. ವ್ಯವಸಾಯಗಾರರಿಗೆ ಬೇಕಾದ ಸಕಲ ಸಾಮಗ್ರಿಗಳನ್ನೂ ಭದ್ರಾವತಿಯಲ್ಲಿರುವ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ತಯಾರಾಗುವ ಚಾಮುಂಡಿ ಬ್ರಾಂಡ್ ಸಿಮೆಂಟಿನಿಂದ ತಯಾರಿಸಿಕೊಳ್ಳಬಹುದು.



ನಿಮೆಂಟಿನ "ಗೋರಕ್ಷಣ"

ಪ್ರತಿ ತಿಂಗಳ ತಾ|| 1 ರಲ್ಲಿ ಪ್ರಕಟವಾಗುವ 'ಗೋರಕ್ಷಣ' ದಲ್ಲಿ ಗೋರಕ್ಷಣೆ, ಪ್ರಾಣಿದಯೆ, ಸಸ್ಯಾಹಾರ, ಪಶುವೈದ್ಯ, ಇವುಗಳನ್ನು ಕುರಿತಾದ ಲೇಖನಗಳು ಪ್ರಕಟಿಸಲ್ಪಡುವವು

ಪತ್ರಿಕೆಗೆ ಪೋಷಕರಾಗಿಯೂ, ಚಂದಾದಾರರಾಗಿಯೂ, ಲೇಖಕರಾಗಿಯೂ, ಪ್ರಚಾರಕರಾಗಿಯೂ ಸಹಕಾರ ನೀಡುವ ಮಹನೀಯರಿಗೆ ವಂದನೆಗಳು.

ಅನುಕೂಲವಾದಂತೆಲ್ಲಾ ಪುಟ ಸಂಖ್ಯೆ ಹೆಚ್ಚಿಸಲಾಗುತ್ತೆ.

ವಿಳಾಸ : 'ಗೋರಕ್ಷಣ' ಸತ್ಯವಾದಿ ಆಫೀಸ್, ಮೈಸೂರು

ಉಡ್‌ಲ್ಯಾಂಡ್ಸ್ ಅಮೋಘ 2 ನೇ ವಾರ

ನಿರೂಪರಾಯ್, ಜೀವ, ದುರ್ಗಾಕೋಟೆ ಶ್ರೀಲೋಕಕಪೂರ್ ಪಾತ್ರವಹಿಸಿರುವ

ಹರಹರ ಮಹಾದೇವ

ಅಮೋಘ ಹಿಂದಿ ಪೌರಾಣಿಕ ಚಿತ್ರ ಪ್ರತಿ ದಿನ 2 ಪ್ರದರ್ಶನಗಳು

ರಣಜಿತ್ 6-3-51 ರಿಂದ

ನರ್ಗಿಸ್, ದಿಲೀಪ್‌ಕುಮಾರ್, ಮನ್ವರ್ ಸುಲ್ತಾನ ಪಾತ್ರವಹಿಸಿರುವ

BABUL ಬಾಬುಲ್

ಅಮೋಘ ಹಿಂದಿ ಚಿತ್ರ — — ಪ್ರತಿ ದಿನ 3 ಪ್ರದರ್ಶನಗಳು

Announcement

Theatre building old materials and furniture are being sold very cheap.

Apply to—

NEW OPERA TALKIES
MYSORE

ಸಿನೆಮಾ ಕಟ್ಟಡದ ಹಳೇ ಸಾಮಾನುಗಳೂ ಫರ್ನೀಚರುಗಳೂ ಸುಲಭ ಬೆಲೆಗೆ ಮಾರಾಟಕ್ಕಿವೆ.

ವಿವರಗಳಿಗೆ—

ನ್ಯೂ ಆಪೇರಾ ಟಾಕೀಸ್
ಮೈಸೂರು

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

ಪಂಸ್ಥಳಕ್ಕೆ ಅಂಚೆವೆಚ್ಚ ಸೇರಿ 12 ಆಣೆ

Edited, Printed and Published by M. S. Krishna Rao at the Satyavadi Press Chamarajapuram Mysore